## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,

## ಸಿದ್ಧಾಪುರ

**ಸಿ.ಸಿ ನಂ. 195/2026**

ಫಿರ್ಯಾದಿಃ ಸುನೀಲ್ ನಾಯ್ಕ. ಎಸ್. ಎನ್
ಅಂದಾಜು ಪ್ರಾಯ 30 ವರ್ಷ,
ವಿಳಾಸಃ ಸಾಲೂರು, ಸಾಲೂರು ಅಂಚೆ,
ಶಿಕಾರಿಪುರ, ಶಿವಮೊಗ್ಗ ಜಿಲ್ಲೆ -577214.
ಹಾಲಿ ವಸತಿ ಆರ್. ಆರ್ ಶೇಟ ಬಿಲ್ಡಿಂಗ್.
ಕೆ.ಕೆ. ಶಾನಭಾಗ ಅಂಗಡಿಯ ಎದುರು,
ಮಾರುತಿ ನಗರ, ಹಾಳದಕಟ್ಟಾ,
ಸಿದ್ದಾಪುರ ತಾಲೂಕ (ಉ.ಕ.)-581355,

-ವಿರುದ್ಧ-

ಆರೋಪಿಃ ಗೀರಿಶ ನಾಯ್ಕ ಎಲ್
ಅಂದಾಜು ಪ್ರಾಯ 27 ವರ್ಷ,
ವಿಳಾಸಃ 034 ರಾಜಗೊಂಡನಹಳ್ಳಿ,
ಚನ್ನಗಿರಿ ತಾಃ ಚನ್ನಗಿರಿ.
ದಾವಣಗೆರೆ ಜಿಲ್ಲೆ -577213.

## ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ ಕಲಂ 351 ರಡಿ ಆರೋಪಿಯ ಹೇಳಿಕೆ

**ಪ್ರಶ್ನೆಃ1** ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀಯಾ?

**ಉತ್ತರಃ**

**ಪ್ರಶ್ನೆಃ** 2. **ಫ್ರಾಸಾ-1 ಸುನೀಲ್ ನಾಯ್ಕ. ಎಸ್. ಎನ್** ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಶಿವಮೊಗ್ಗಾ ಜಿಲ್ಲಾ ಶಿಕಾರಿಪುರ

ತಾಲೂಕು ಸಾಲೂರು ಖಾಯಂ ನಿವಾಸಿ ಇದ್ದು ಹಾಲಿ ವಸತಿ ಆರ್. ಆರ್. ಶೇಟ ಬಿಲ್ಡಿಂಗ್ ಕೆ.ಕೆ.ಶಾನಭಾಗ ಅಂಗಡಿಯ ಎದುರು ಮಾರುತಿ ನಗರ ಹಾಳದಕಟ್ಟಾದಲ್ಲಿ ಇದ್ದು ಪಿರ್ಯಾದಿಯು ಪೋಲೀಸ್ ಇಲಾಖೆಯಲ್ಲಿ ಕಾನಸ್ಟೇಬಲ್ ಹುದ್ದೆಯಲ್ಲಿದ್ದು ಆರೋಪಿತನಾದ ನಿನಗೆ ಪರಿಚಯಸ್ಥರಾಗಿರುತ್ತಾರೆ. ಆರೋಪಿತನಾದ ನೀನು 2024 ನೇ ಇಸ್ವಿ ಮೇ ತಿಂಗಳಲ್ಲಿ ಪಿರ್ಯಾದಿಗೆ ಖಾಲಿ ನಿವೇಶನ ಕೊಡಿಸುವುದಾಗಿ ರೂ. 7,75,000/- ಹಣವನ್ನು ಪಡೆದಿರುವಿರಿ ಎಂದು ಸಾಕ್ಷವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 3 ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಿಗದಿತ ಅವಧಿಯ ಒಳಗೆ ನೀನು ಪಿರ್ಯಾದುದಾರನಿಗೆ ಯಾವುದೇ ನಿವೇಶನ ಕೊಡಿಸಿದ್ದು ಇರುವುದಿಲ್ಲಾ ಹಾಗೂ ಪಿರ್ಯಾದಿಯು ನಿನ್ನನ್ನು ಭೆಟ್ಟಿಯಾಗಿ ಹಣವನ್ನು ನೀಡುವಂತೆ ಕೇಳಲಾಗಿ, ನೀನು ನೀಡಬೇಕಾದ ಹಣವನ್ನು ಚೆಕ ಮೂಲಕ ಮರಳಿಸುವುದಾಗಿ ತಿಳಿಸಿ, ನಿನ್ನ ಖಾತೆ ಇರುವ ಕೆನರಾ ಬ್ಯಾಂಕ ದೇವರಹಳ್ಳಿ ಶಾಖೆಯ ದಿನಾಂಕ 06.03.2026 ರ ಚೆಕ್ಕಿನ ಸಂಖ್ಯೆ: 380230 ನ ರೂ.7,75,000/- ನ ಚೆಕನ್ನು ನೀಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 4. ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತದನಂತರ ಫಿರ್ಯಾದುದಾರರು ಸದರಿ ಚೆಕನ್ನು ನಗದು ಗೊಳಿಸಲು SBI Bank,. ಸಿದ್ದಾಪುರ ಶಾಖೆಗೆ ಹಾಕಿದಾಗ ನಿನ್ನ ರುಜು ತಾಳೆಯಾಗದ ಕಾರಣ ದಿಃ 06.03.2026 ರಂದು "Drawers Signature differs" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 18.03.2026 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸು ದಿನಾಂಕ: 20.03.2026 ರಂದು ನೀನು ಸದರಿ ನೋಟಿಸ್ಸನ್ನು ಪಡೆದಿದ್ದರು ಸಹ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟುಮೆಂಟ ಆಕ್ಟ, 138** ರ ಅಡಿಯಲ್ಲಿ ಅಫರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 5. ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾನು ಈ ಪ್ರಕರಣದಲ್ಲಿ ಪಿರ್ಯಾದಿ ಆಗಿದ್ದು, ತನ್ನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಎಂದು ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳು ಸತ್ಯ ಇರುತ್ತವೆ ಎಂದು, ಪ್ರಮಾಣ ಪತ್ರದಲ್ಲಿ ಇರುವ ಸಹಿ ತನ್ನ ಸಹಿ ಆಗಿರುತ್ತದೆ ಎಂದು, ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ ದಿಃ 06.03.2026 ರ ಕೆನರಾ ಬ್ಯಾಂಕ್ ನ ಚೆಕ್ ನ್ನು ನಿ.ಪಿ–1 ಎಂದು, ಸದರಿ ನಿ.ಪಿ–1 ರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ–1(ಎ) ಎಂದು, ಸದರಿ ನಿ.ಪಿ–1 ಚೆಕ್ ಅಮಾನ್ಯಗೊಂಡ ಬಗ್ಗೆ ಒಂದು ಬ್ಯಾಂಕ್ ಹಿಂಬರಹವನ್ನು ನಿ.ಪಿ–2 ಎಂದು, ದಿನಾಂಕ 18.03.2026 ನೀಡಿದ ಲೀಗಲ್ ನೋಟೀಸ್ ನ ಕಚೇರಿ ಪ್ರತಿಯನ್ನು ನಿ.ಪಿ–3 ಎಂದು, ಅಂಚೆ ರಶೀಧಿಯನ್ನು ನಿ.ಪಿ–4 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ.5 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ–**

ಪ್ರಶ್ನೆಃ **6**. ಈ ಪ್ರಕರಣದಲ್ಲಿ ನಿನಗೆ ಇನ್ನು ಏನಾದರೂ ಹೇಳುವುದು ಇದೆಯೇ ?

**ಉತ್ತರಃ**

ಪ್ರಶ್ನೆಃ **7**. ನಿನ್ನ ಪರವಾಗಿ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುವಿರಾ?

**ಉತ್ತರಃ**

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **06–08–2026** ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**